# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **567**

ಸದಸ್ಯರ ಹೆಸರು : ಶ್ರೀ ಐವನ್ ಡಿಸೋಜಾ (ವಿಧಾನಸಭಾ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 09-03-2026

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ತಾಲ್ಲೂಕಿನ ಮಹಾನಗರ ಪಾಲಿಕೆ ವ್ಯಾಪ್ತಿಯ ಕುಡುಪು ಪ್ರದೇಶದಲ್ಲಿ 110 ಕೆ. ವಿ. ಸಾಮರ್ಥ್ಯದ ಸಬ್-ಸ್ಟೇಷನ್ ನ್ನು 2018ರಲ್ಲಿ ನಿರ್ಮಿಸಬೇಕೆಂದು ತೀರ್ಮಾನಿಸಲಾಗಿದ್ದು ರೈತರು ಅನೇಕ ಹೋರಾಟ ನಡೆಸಿದರೂ ಇನ್ನು ಉಪಕೇಂದ್ರ ಕಾಮಗಾರಿ ಸ್ಥಾಪನೆಯಾಗದೆ ರೈತರಿಗೆ ತೊಂದರೆಗಳಾಗಿದ್ದು ಸರ್ಕಾರ ಈವರೆಗೂ ಕ್ರಮ ಕೈಗೊಳ್ಳದೇ ಇರಲು ಕಾರಣವೇನು. | ಮಂಗಳೂರು ತಾಲ್ಲೂಕಿನ ಕುಡುಪುವಿನಲ್ಲಿ 2x20 ಎಂ.ವಿ.ಎ., 110/11 ಕೆ.ವಿ. ವಿದ್ಯುತ್ ಉಪಕೇಂದ್ರದ ಸ್ಥಾಪನೆ ಕಾಮಗಾರಿಗೆ ದಿನಾಂಕ 29.08.2022 ರಂದು ನಡೆದ 89ನೇ ಕವಿಪ್ರನಿನಿಯ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ.<br>ಸದರಿ ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಕುಡುಪು ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲವಾದ್ದರಿಂದ, ಉಪಕೇಂದ್ರದ ನಿರ್ಮಾಣಕ್ಕೆ ಸೂಕ್ತ ಖಾಸಗಿ ಸ್ಥಳವನ್ನು ಗುರುತಿಸಿ ಹಾಗು ಅದರ ತಾಂತ್ರಿಕ ಸೂಕ್ತತೆಯನ್ನು ಪರಿಶೀಲಿಸಿ ಸ್ಥಳ ಅಂತಿಮಗೊಳಿಸಲಾಗಿರುತ್ತದೆ.<br>ಕುಡುಪು ಗ್ರಾಮದ ಸರ್ವೆ ನಂ. 16/17, 64/6, 63/3, 133/3A2 & 133/5 ರಲ್ಲಿ 2.58 ಎಕರೆ ಖಾಸಗಿ ಜಮೀನು ಖರೀದಿಗೆ ಜಿಲ್ಲಾಧಿಕಾರಿಯವರು ದಿನಾಂಕ 15.02.2023 ರಂದು ಭೂಮಿಯ ಸೆಂಟ್ಸ್ 1 ಕ್ಕೆ ರೂ. 3,79,705.00 ರಂತೆ ದರ ನಿಗದಿಪಡಿಸಿರುತ್ತಾರೆ.<br>ಈ ದರಕ್ಕಿಂತ ಕಡಿಮೆ ದರದಲ್ಲಿ ಸುತ್ತಮುತ್ತಲಿನ ಪ್ರದೇಶದಲ್ಲಿನ ಸೂಕ್ತ ಖಾಸಗಿ ಜಮೀನಿನ ಲಭ್ಯತೆ ಬಗ್ಗೆ ಪರಿಶೀಲಿಸಲು ದಿನಾಂಕ 11.08.2023 ರ ಉದಯವಾಣಿ ಮತ್ತು ಹೊಸದಿಗಂತ ಕನ್ನಡ ದಿನಪತ್ರಿಕೆಯಲ್ಲಿ ಪತ್ರಿಕೆ ಪ್ರಕಟಣೆ ಹೊರಡಿಸಲಾಗಿರುತ್ತದೆ.<br>ಆದರೆ, ಜಿಲ್ಲಾಧಿಕಾರಿಯವರು ನಿಗಧಿಪಡಿಸಿರುವ ದರಕ್ಕೆ ಯಾವುದೇ ಖಾಸಗಿ ಜಮೀನು ಲಭ್ಯವಿಲ್ಲವಾದ್ದರಿಂದ ಪ್ರಸ್ತಾವನೆಯಲ್ಲಿರುವ ಕುಡುಪು ಗ್ರಾಮದ ಖಾಸಗಿ ಜಮೀನಿನಲ್ಲಿಯೇ 110/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ನಿಗಮ ಕಾರ್ಯಾಲಯಕ್ಕೆ ದಿನಾಂಕ 05-10-2023 ರಂದು ಸ್ವೀಕೃತಗೊಂಡಿರುತ್ತದೆ.<br>ತದನಂತರ ನಿರ್ದೇಶಕರು (ತಾಂತ್ರಿಕ), ಕವಿಪ್ರನಿನಿ, ಬೆಂಗಳೂರು ರವರು ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಹಾಸನ ಹಾಗೂ ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ ವೃತ್ತ, ಮಂಗಳೂರು ಇವರೊಂದಿಗೆ ದಿನಾಂಕ 09.02.2024 ರಂದು ಪ್ರಸ್ತಾವಿತ ಜಮೀನಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದು, ನಿಗಮ ಕಾರ್ಯಾಲಯದಿಂದ ಕೆಲವೊಂದು (ಪರ್ಯಾಯ ಜಮೀನು ಲಭ್ಯವಿಲ್ಲದಿರುವ ಬಗ್ಗೆ, ನಿಗಧಿಗೊಳಿಸಿದ ದರವನ್ನು ಕಡಿಮೆಗೊಳಿಸಲು, ವಿನ್ಯಾಸ ನಕ್ಷೆ ಮತ್ತು ಸಂಪರ್ಕ ರಸ್ತೆಯನ್ನು ನಿಗಮದ ಸ್ವಾಧೀನ ಪಡೆಯಲು ಕ್ರಮ ಇತ್ಯಾದಿ.,) ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಮರುಸಲ್ಲಿಸಲು ವಲಯ ಕಚೇರಿಗೆ ದಿನಾಂಕ 13.05.2024 ರಂದು ತಿಳಿಸಲಾಗಿರುತ್ತದೆ.<br>ದಿನಾಂಕ 26.12.2024 ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರು ದಾಖಲಾತಿಗಳನ್ನು ಕವಿಪ್ರನಿನಿಯ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ. |

| | | |
|---|---|---|
| | | ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಹಾಸನ ರವರು ತಹಶೀಲ್ದಾರರು ನೀಡಿರುವ ವರದಿ, ಖರೀದಿ ಒಡಂಬಡಿಕೆ, ರಸ್ತೆಯ ಅಗಲ ಮತ್ತು ಮುಖ್ಯ ರಸ್ತೆಗೆ ಇರುವ ದೂರಗಳನ್ನೊಳಗೊಂಡ ನಕ್ಷೆ, ಇತ್ಯಾದಿ ವಿವರಗಳ ವರದಿಯನ್ನೊಳಗೊಂಡಂತೆ, ಭೂಸ್ವಾಧೀನ ಪ್ರಸ್ತಾವನೆಯು ನಿಗಮ ಕಾರ್ಯಾಲಯಕ್ಕೆ ಅನುಮೋದನೆಗಾಗಿ ದಿನಾಂಕ: 14.03.2025ರಂದು ಸಲ್ಲಿಸಿರುತ್ತಾರೆ.<br>ಕುಡುಪುವಿನಲ್ಲಿ ಪ್ರಸ್ತಾವಿತ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಗುರುತಿಸಿರುವ ಸ್ಥಳವನ್ನು ದಿನಾಂಕ 20.06.2025 ರಂದು ಸ್ಥಳ ಪರಿಶೀಲನೆ ಮಾಡಲಾಗಿರುತ್ತದೆ.<br>ಸದರಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ದಿನಾಂಕ:03.07.2025 ರಂದು ನಡೆದ ಕವಿಪ್ರನಿನಿಯ (ಸೆಸ್ಕ್ ಮತ್ತು ಮೆಸ್ಕಾಂ) 2 ನೇ ತಾಂತ್ರಿಕ ಸಮನ್ವಯ ಸಭೆಯಲ್ಲಿ ಪ್ರಸ್ತಾವಿತ ಕಾಮಗಾರಿಯನ್ನು ಮರು ಅಂಗೀಕರಿಸಿ ಅನುಮೋದನೆ ನೀಡಲಾಗಿದೆ.<br>ಪ್ರಸ್ತುತ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಕುಡುಪುವಿನಲ್ಲಿ 2x20 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಸಲುವಾಗಿ ಸದರಿ ಗ್ರಾಮದ ಸರ್ವೆ ನಂ. 16/17, 64/6, 63/3, 133/3A2 ಮತ್ತು 133/5 ಗಳಲ್ಲಿನ ಒಟ್ಟು ವಿಸ್ತೀರ್ಣ 2.58 ಎಕರೆ ಖಾಸಗಿ ಭೂ ಪರಿವರ್ತಿತ ಜಮೀನಿಗೆ ಜಿಲ್ಲಾಧಿಕಾರಿ, ದಕ್ಷಿಣಕನ್ನಡ ಜಿಲ್ಲೆರವರು ದಿನಾಂಕ 15.02.2023 ರಂದು ನಿಗಧಿಪಡಿಸಿದ ದರದನ್ವಯ (2.58 ಎಕರೆಗೆ ರೂ.9,79,63,890.00 ಗಳು) ಸದರಿ ಜಮೀನನ್ನು ನಿಗಮದ ಹೆಸರಿಗೆ ನೋಂದಾಯಿಸಲು ತಗಲುವ ಶಾಸನಬದ್ಧ ವೆಚ್ಚ ಭರಿಸಲು ಅನುಮೋದನೆ ಸಂಬಂಧ ಪ್ರಸ್ತಾವನೆಯು ನಿಗಮ ಕಾರ್ಯಾಲಯದಲ್ಲಿ ಪ್ರಸ್ತುತ ಪರಿಶೀಲನಾ ಹಂತದಲ್ಲಿರುತ್ತದೆ. |
| ಆ) | ರೈತರಿಗೆ ಮತ್ತು ಕೈಗಾರಿಕೆಗಳಿಗೆ ಗುಣಮಟ್ಟದ ವಿದ್ಯುತ್ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು) | ಮೆಸ್ಕಾಂ ವ್ಯಾಪ್ತಿಯಲ್ಲಿ ಅಗತ್ಯಕ್ಕನುಗುಣವಾಗಿ ವಿದ್ಯುತ್ ಜಾಲ ಬಲವರ್ಧನೆ, ನಿರ್ವಹಣೆ ಮೊದಲಾದ ಕಾಮಗಾರಿಗಳನ್ನು ಕೈಗೊಂಡು ರೈತರಿಗೆ ಸರ್ಕಾರ ನಿಗದಿಪಡಿಸಿದ ಅವಧಿಗೆ 3-ಫೇಸ್ ಮತ್ತು ಸಿಂಗಲ್-ಫೇಸ್ ವಿದ್ಯುತ್ ಹಾಗೂ ಕೈಗಾರಿಕೆಗಳಿಗೆ ನಿರಂತರ ಗುಣಮಟ್ಟದ ಸಮರ್ಪಕ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. |
| ಇ) | 24 ಗಂಟೆಗಳ ಕಾಲ ಗುಣಮಟ್ಟದ ವಿದ್ಯುತ್ ನೀಡದೇ ಸುಮಾರು 7 ಗ್ರಾಮಗಳಾದ ಅಡ್ಯಾರು, ಪಣಂಬೂರು, ಉಳಾಯಿಬೆಟ್ಟು ಗುರುಪುರ, ಕುಡುಪು, ತಿರುವೈಲು ಪ್ರದೇಶದ ರೈತರ ಬೇಡಿಕೆ ಪೂರೈಸಲು ಸರ್ಕಾರ ಕೈಗೊಂಡ ಕ್ರಮವೇನು: ಈ ರೀತಿಯ ಎಷ್ಟು ಪ್ರಕರಣಗಳು ರಾಜ್ಯಾದ್ಯಂತ ಬಾಕಿ ಇವೆ; | ಮೆಸ್ಕಾಂ ವ್ಯಾಪ್ತಿಯ ಅಡ್ಯಾರು, ಪಣಂಬೂರು, ಉಳಾಯಿಬೆಟ್ಟು, ಗುರುಪುರ, ಕುಡುಪು, ತಿರುವೈಲು ಗ್ರಾಮಗಳಲ್ಲಿ ಗುಣಮಟ್ಟದ ನಿರಂತರ ವಿದ್ಯುತ್ ಸರಬರಾಜು ಮಾಡಲಾಗುತ್ತಿದ್ದು, ದಿನವಹಿ ಸರಾಸರಿ 23:20 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.<br>**ಮೆಸ್ಕಾಂ ವ್ಯಾಪ್ತಿಯ** ಅಡ್ಯಾರು, ಪಣಂಬೂರು, ಉಳಾಯಿಬೆಟ್ಟು, ಗುರುಪುರ, ಕುಡುಪು, ತಿರುವೈಲು ಗ್ರಾಮಗಳಲ್ಲಿ ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಕೈಗೊಂಡಿರುವ ಕಾಮಗಾರಿಗಳ ವಿವರಗಳು ಕೆಳಕಂಡಂತಿದೆ:<br>**ಕವಿಪ್ರನಿನಿ ವತಿಯಿಂದ** ಕೆಳಕಂಡ ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ:<br>1. ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ಅಡ್ಯಾರ್‌ನಲ್ಲಿ 2x20 ಎಂ.ವಿ.ಎ., 110/11 ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪನೆ ಕಾಮಗಾರಿಗೆ ಕವಿಪ್ರನಿನಿಯ 79ನೇ ತಾಂತ್ರಿಕ ಸಮನ್ವಯ ಸಮಿತ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಅರ್ಕುಳ ಗ್ರಾಮದ ಸ.ನಂ. 25/3 ರಲ್ಲಿ 3.0ಎಕರೆ ಖಾಸಗಿ ಜಮೀನು ಗುರುತಿಸಲಾಗಿದ್ದು, ಜಿಲ್ಲಾಧಿಕಾರಿರವರಿಂದ ದರ ನಿಗಧಿಯಾಗಬೇಕಿದೆ. |

2. ಮಂಗಳೂರು ತಾಲ್ಲೂಕಿನ ಎನ್.ಎಮ್.ಪಿ.ಎ. [ನವ ಮಂಗಳೂರು ಬಂದರು ಪ್ರಾಧಿಕಾರ (NMPA)] ಯಲ್ಲಿ 110/33/11 ಕೆ.ವಿ. ವಿದ್ಯುತ್ ಉಪಕೇಂದ್ರ ನಿರ್ಮಾಣ ಕಾಮಗಾರಿಗೆ ನವ ಮಂಗಳೂರು ಬಂದರು ಪ್ರಾಧಿಕಾರಕ್ಕೆ ಸೇರಿದ ಸುಮಾರು 4.0 ಎಕರೆ ಜಮೀನನ್ನು 30 ವರ್ಷಗಳಿಗೆ ಲೀಸ್ ಪಡೆಯಲು ಪ್ರಸ್ತಾವನೆಯು ನಿಗಮ ಕಚೇರಿಯಿಂದ ಪ್ರಾಸ್ತಾವಿಕ ಅನುಮೋದನೆ ದೊರಕಿದ್ದು, ಲೀಸ್ ಹಂತದ ಕರಾರು ಒಪ್ಪಂದದ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ.
3. ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ಕುಡುಪುವಿನಲ್ಲಿ 2x20ಎಂ.ವಿ.ಎ., 110/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ದಿನಾಂಕ:03.07.2025 ರಂದು ನಡೆದ ಕವಿಪ್ರನಿನಿಯ (ಸೆಸ್ಕ ಮತ್ತು ಮೆಸ್ಕಾಂ) 2 ನೇ ತಾಂತ್ರಿಕ ಸಮನ್ವಯ ಸಭೆಯಲ್ಲಿ ಪ್ರಸ್ತಾವಿತ ಕಾಮಗಾರಿಯನ್ನು ಮರು ಅಂಗೀಕರಿಸಿ ಅನುಮೋದನೆ ನೀಡಲಾಗಿದೆ. 2.58 ಎಕರೆ ಖಾಸಗಿ ಪರಿವರ್ತಿತ ಜಮೀನನ್ನು ನೇರ ಖರೀದಿಸುವ ಪ್ರಸ್ತಾವನೆಯು ಪ್ರಸ್ತುತ ಕವಿಪ್ರನಿನಿ ನಿಗಮ ಕಾರ್ಯಾಲಯದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ.

**ಮೆಸ್ಕಾಂ ವತಿಯಿಂದ** ಕೈಗೊಳ್ಳಲಾದ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿದೆ:

| ಆರ್ಥಿಕ ವರ್ಷ 2025-26 (ಜನವರಿ-26 ರವರೆಗೆ) | ವ್ಯವಸ್ಥೆ ಸುಧಾರಣೆಯಡಿ ಅಳವಡಿಸಲಾದ ಹೆಚ್ಚುವರಿ ಪರಿವರ್ತಕಗಳ ಸಂಖ್ಯೆ | ಎಲ್.ಟಿ ಮಾರ್ಗದ ವಾಹಕ ಬದಲಾವಣೆ (ಕಿ.ಮೀ.) | ಹೆಚ್.ಟಿ. ಲಿಂಕ್ ಲೈನ್ (ಕಿ.ಮೀ.) |
|---|---|---|---|
| ಮೆಸ್ಕಾಂ ವ್ಯಾಪ್ತಿಯ 7 ಗ್ರಾಮಗಳಾದ ಅಡ್ಯಾರು, ಪಣಂಬೂರು, ಉಳಾಯಿಬೆಟ್ಟು, ಗುರುಪುರ, ಕುಡುಪು, ತಿರುವೈಲು ಪ್ರದೇಶಗಳಲ್ಲಿ | 12 | 10.394 | 0.211 |

**ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ:**

ರಾಜ್ಯದಲ್ಲಿ ಪ್ರಸ್ತುತ ದಿನವಹಿ ಸರಾಸರಿ 23 ರಿಂದ 24 ಗಂಟೆಗಳ ಕಾಲ ಸಮರ್ಪಕ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಹಾಗೂ ರೈತರಿಗೆ ಸರ್ಕಾರ ನಿಗದಿಪಡಿಸಿದ ಅವಧಿಗೆ 3-ಫೇಸ್ ಮತ್ತು ಸಿಂಗಲ್-ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಬೇಡಿಕೆ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಕೈಗೊಂಡಿರುವ ಕಾಮಗಾರಿಗಳ ವಿವರಗಳು ಕೆಳಕಂಡಂತಿದೆ:

- **ಕವಿಪ್ರನಿನಿ ವತಿಯಿಂದ** ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಒಟ್ಟು 119 ಸಂಖ್ಯೆಗಳ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, ವಲಯವಾರು ವಿವರಗಳು ಈ ಕೆಳಕಂಡಂತಿದೆ:

| ವಲಯದ ಹೆಸರು | ಪ್ರಗತಿಯಲ್ಲಿರುವ ವಿದ್ಯುತ್ ಉಪಕೇಂದ್ರ ಸ್ಥಾಪನೆ ಕಾಮಗಾರಿಗಳು (ಸಂಖ್ಯೆಗಳಲ್ಲಿ) |
|---|---|
| ಬಾಗಲಕೋಟೆ | 36 |
| ಬೆಂಗಳೂರು | 18 |
| ಹಾಸನ | 21 |
| ಕಲಬುರಗಿ | 09 |
| ಮೈಸೂರು | 22 |
| ತುಮಕೂರು | 13 |
| **ಒಟ್ಟು** | **119** |

- **ಎಸ್ಕಾಂ ವತಿಯಿಂದ:** ಎಲ್ಲಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ವ್ಯವಸ್ಥೆ ಸುಧಾರಣೆಯಡಿ ಹೆಚ್ಚುವರಿ ಪರಿವರ್ತಕಗಳ ಅಳವಡಿಕೆ, ಲಿಂಕ್ ಲೈನ ಗಳ ನಿರ್ಮಾಣ, ಹೆಚ್.ಟಿ. ಮತ್ತು ಎಲ್.ಟಿ ಮಾರ್ಗಗಳ ವಾಹಕ ಬದಲಾವಣೆ ಮೊದಲಾದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ವಿವರಗಳು ಈ ಕೆಳಕಂಡಂತಿದೆ:

| ಆರ್ಥಿಕ ವರ್ಷ 2025-26 (ಜನವರಿ-26ರ ವರೆಗೆ) | ವ್ಯವಸ್ಥೆ ಸುಧಾರಣೆಯಡಿ ಅಳವಡಿಸಲಾದ ಹೆಚ್ಚುವರಿ ಪರಿವರ್ತಕಗಳ ಸಂಖ್ಯೆ | ಹೆಚ್.ಟಿ ಮಾರ್ಗದ ವಾಹಕ ಬದಲಾವಣೆ (ಕಿ.ಮೀ.) | ಎಲ್.ಟಿ ಮಾರ್ಗದ ವಾಹಕ ಬದಲಾವಣೆ (ಕಿ.ಮೀ.) | ಹೆಚ್.ಟಿ ಲಿಂಕ್ ಲೈನ್ (ಕಿ.ಮೀ.) |
|---|---|---|---|---|
| **ಬೆಸ್ಕಾಂ** | 951 | 747.56 | 474.91 | 895.44 |
| ಸೆಸ್ಕ್ | 525 | 626.35 | 560.30 | 902.63 |
| ಮೆಸ್ಕಾಂ | 975 | 319.65 | 1220.11 | 587.05 |
| ಹೆಸ್ಕಾಂ | 154 | 1219 | 800 | 950 |
| ಜೆಸ್ಕಾಂ | 685 | 259.93 | 182.30 | 671.00 |
| ಒಟ್ಟು | 3290 | 3172.49 | 3237.62 | 4006.12 |

| | | |
|---|---|---|
| ಈ) | ಮೆಸ್ಕಾಂ ಮಂಗಳೂರು ವ್ಯಾಪ್ತಿಯಲ್ಲಿ ವಿದ್ಯುತ್ ಕೊರತೆ ಇರುವ ಬಗ್ಗೆ ಸಾರ್ವಜನಿಕರ ದೂರು ಇದ್ದು ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಮೆಸ್ಕಾಂ ಮಂಗಳೂರು ವ್ಯಾಪ್ತಿಯಲ್ಲಿ ವಿದ್ಯುತ್ ಕೊರತೆ ಇರುವ ಬಗ್ಗೆ ಸಾರ್ವಜನಿಕರಿಂದ ಯಾವುದೇ ದೂರು ದಾಖಲಾಗಿರುವುದಿಲ್ಲ ಹಾಗೂ ಪ್ರಸ್ತುತ ಯಾವುದೇ ವಿದ್ಯುತ್ ಕೊರತೆ ಇರುವುದಿಲ್ಲ, |

ಸಂಖ್ಯೆ: ಎನರ್ಜಿ 57 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು